# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

## ಸಿ.ಸಿಃ 406/2025

ಫ್ರಾಸಾ-1, ಚಾಸಾ-1

ಸಾಕ್ಷಿದಾರರ ಹೆಸರು : ಮೋಹನ್ ರೆಡ್ಡಿ ಎಸ್.

ತಂದೆಯ ಹೆಸರು : ನಂಜುಂಡರೆಡ್ಡಿ

ವಯಸ್ಸು : 37ವರ್ಷ

ಉದ್ಯೋಗ : ಪೊಲೀಸ್ ಇನ್ಸ್‌ಪೆಕ್ಟರ್

ವಾಸ : ಬೆಂಗಳೂರು

ಸಾಕ್ಷಿಗೆ ದಿನಾಂಕಃ 04.12.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ದಿಃ 21.03.2024 ರಿಂದ 11.06.2024ರವರೆಗೆ ಚಾಮರಾಜನಗರ ಅಬಕಾರಿ ವಲಯದಲ್ಲಿ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 22.03.2024 ರಂದು ಸಂಃ 6.30 ರ ಸಮಯದಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ-2 ರಿಂದ 4ರವರ ಜೊತೆ ನಮ್ಮ ಇಲಾಖಾಜೀಪು ನೊಂದಣಿ ಸಂಃ KA-10-G-0695 ರಲ್ಲಿ ಮೂಡಲಪುರ ಗ್ರಾಮದ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ಒಬ್ಬ ಆಸಾಮಿಯು ದ್ವಿಚಕ್ರ ವಾಹನದ ಮುಂಭಾಗ ಒಂದು ಪ್ಲಾಸ್ಟಿಕ್ ಚೀಲದ ಗಂಟು ಇಟ್ಟುಕೊಂಡು ಒಂದು ಬೈಪಾಸ್ ಗೆ ತೆರಳುವ ರಸ್ತೆಯಿಂದ ಮೂಡಲಪುರ ಗ್ರಾಮದ ಕಡೆಗೆ ಬರುತ್ತಿದ್ದು, ಆತ ಹೊಂದಿದ ಪ್ಲಾಸ್ಟಿಕ್ ಚೀಲದ ಗಂಟಿನ ಮೇಲೆ ಅನುಮಾನಗೊಂಡ ನಾವುಗಳು ಅವನನ್ನು ತಡೆದು ನಿಲ್ಲಿಸಿ, ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡೆವು. ನಂತರ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ 90 ಮಿಲಿಯ 35 ಹೈವಾರ್ಡ್ಸ್ ಚೀರ್ಸ್ ವಿಸ್ಕಿಯ ಕಂಡುಬಂದವು. ನಂತರ ಆಸಾಮಿಯನ್ನು ಮದ್ಯವನ್ನು ಸಾಗಿಸಲು ಮತ್ತು ಮಾರಾಟ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು

ಕೇಳಿದಾಗ ಇಲ್ಲ ಎಂದು ತಿಳಿರಸಿತ್ತಾನೆ. ಆದ್ದರಿಂದ ಆ ಸಮಯದಲ್ಲಿ ಆವೇಳೆಯಾಗಿದ್ದರಿಂದ ನಮ್ಮ ಇಲಾಖಾ ಸಿಬ್ಬಂದಿಗಳನ್ನೇ ಅಬಕಾರಿ ಕಾಯ್ದೆಯ 54 ರಡಿಯಲ್ಲಿ ರುವ ಅಧಿಕಾರವನ್ನು ಬಳಸಿಕೊಂಡು ಆರೋಪಿಯ ಬಳಿ ಇದ್ದ ಮದ್ಯದ ಟೆಟ್ರಾಪ್ಯಾಕ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲ ಮತ್ತು ದ್ವಿ ಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡು, ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿ ಕೊಡಲು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ , ಸೀಲು ಸಂಃ 285ರಿಂದ ಸೀಲು ಮಾಡಿದೇವು ಮತ್ತು ಅದಕ್ಕೆ ಪಂಚರಾದ ಸಿಬ್ಬಂದಿಗಳ ಸಿಬ್ಬಂದಿಗಳ ಸಹಿಯನ್ನು ಚೀಟಿಯನ್ನು ಅಂಟಿಸಲಾಯಿತು ಹಾಗೂ ಅದಕ್ಕೆ ಸೀಲು ಮಾಡಲಾಯಿತು. ಮಹಜರ್ ನ್ನು ಸಂಃ 6.30 ರಿಂದ 7.30ವರೆಗೆ ನಡೆಸಿ ನಿಯಾಮಾನುಸಾರ ಆರೋಪಿಯನ್ನು ಬಂಧಿಸಿ, ಆರೋಪಿ ಮತ್ತು ಮಾಲುಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಆ ನಂತರ ಈ ಬಗ್ಗೆ ಸ್ವ ವರದಿಯನ್ನು ತಯಾರಿಸಿ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತೇನೆ. ಮುದ್ದೆಮಾಲುಗಳನ್ನು ನಮ್ಮ ಠಾಣಾ ಮಾಲುಪಟ್ಟಿ ನಮೂನೆಯಲ್ಲಿ ನಮೂದಿಸಿ ಘನ ನ್ಯಾಯಾಯಕ್ಕೆ ನಿವೇದಿಸಿಕೊಂಡಿರುತ್ತೇನೆ ಮತ್ತು ಆರೋಪಿಯನ್ನು ಸಿಬ್ಬಂದಿಗಳ ಸಹಾಯದೊಂದಿಗೆ ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸ್ವ ವರದಿಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಮಾಲುಪಟ್ಟಿಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 35 ಮದ್ಯದ ಟೆಟ್ರಾಪ್ಯಾಕ್ ಗಳನ್ನು ಒಟ್ಟಾಗಿ M.O-1 ಎಂದು, ಪ್ಲಾಸ್ಟಿಕ್ ಬ್ಯಾಗನ್ನು M.O-2 ಎಂದು

ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆಸಾಮಿಯನ್ನೇ ಆ ದಿನ ನಾವು ಮದ್ಯ ಸಾಗಿಸುವ ಸಮಯದಲ್ಲಿ ಬಂಧಿಸಿರುವುದಾಗಿ ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ.

**ಪಾಟೀಸವಾಲುಃ ಶ್ರೀ ಜಿ.ಎಸ್.ಕೆ. ವಕೀಲರಿಂದಃ**

ದಿನಾಂಕಃ 22.03.2024 ರಂದು ಸಂಃ 6.30 ರ ಸಮಯದಲ್ಲಿ ನಾನು ಮತ್ತು ನಮ್ಮ ಠಾಣಾ ಸಿಬ್ಬಂದಿಯೊಂದಿಗೆ ನಗರ ಗಸ್ತು ನಡೆಸುತ್ತಿದಾಗ, ಚಾಮರಾಜನಗರ ವಲಯ ಮೂಡಲಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗ ನಾವು ಗಸ್ತಿನಲ್ಲಿರುವ ಸಮಯದಲ್ಲಿ ಒಬ್ಬ ವ್ಯಕ್ತಿಯು ಆತನ ಮೋಟಾರ್ ಸೈಕಲಿನಲ್ಲಿ ಬಿಳಿ ಬಣ್ಣದ ಚೀಲವನ್ನು ಇಟ್ಟುಕೊಂಡು ಬರುತ್ತಿದ್ದನ್ನು, ಅನುಮಾನಗೊಂಡ ನಾವುಗಳು ಅವನನ್ನು ತಡೆದು ನಿಲ್ಲಿಸಿ, ನೋಡಿದಾಗ ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

ನಂತರ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ 90 ಮಿಲಿಯ 30 ಹೈವಾರ್ಡ್ಸ್ ಚೇರ್ಸ್ ವಿಸ್ಕಿಯ ಕಂಡುಬಂದವು. ನಂತರ ಆಸಾಮಿಯನ್ನು ಮದ್ಯವನ್ನು ಸಾಗಿಸಲು ಮತ್ತು ಮಾರಾಟ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು ಕೇಳಿದಾಗ ಇಲ್ಲ ಎಂದು ತಿಳಿರಸಿರುತ್ತಾನೆ. ಆದ್ದರಿಂದ ಆ ಸಮಯದಲ್ಲಿ ಆವೇಳೆಯಾಗಿದ್ದರಿಂದ ನಮ್ಮ ಇಲಾಖಾ ಸಿಬ್ಬಂದಿಗಳನ್ನೇ ಅಬಕಾರಿ ಕಾಯ್ದೆಯ 54 ರಡಿಯಲ್ಲಿ ರುವ ಅಧಿಕಾರವನ್ನು ಬಳಸಿಕೊಂಡು ಆರೋಪಿಯ ಬಳಿ ಇದ್ದ ಮದ್ಯದ ಟೆಟ್ರಾಪ್ಯಾಕ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲ ಮತ್ತು ದ್ವಿ ಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಂಚರ ಸಹಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. . ಮಹಜರ್ ನ್ನು ಸಂಃ 6.30 ರಿಂದ 7.30ವರೆಗೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ನಂತರ ಈ ಬಗ್ಗೆ ಸ್ವ ವರದಿಯನ್ನು ತಯಾರಿಸಿ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತೇನೆ. ನಮ್ಮ ಠಾಣಾ ಅಂಕಿ–ಸಂಖ್ಯೆಗೋಸ್ಕರ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

**ಸಿ.ಸಿಃ 406/2025**

ಫ್ರಾಸಾ–2, ಚಾಸಾ–2

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಂದ್ರ ಹೆಚ್.ಎಂ |
| ತಂದೆಯ ಹೆಸರು | : | ಮಹಾದೇವೆಗೌಡ |
| ವಯಸ್ಸು | : | 34ವರ್ಷ |
| ಉದ್ಯೋಗ | : | ಅಬಕಾರಿ ಕಾನ್ಸಟೇಬರ್ |
| ವಾಸ | : | ನಂಜನಗೂಡು |

ಸಾಕ್ಷಿಗೆ ದಿನಾಂಕಃ 04.12.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2019 ರಿಂದ ಇದುವರೆಗೂ ಚಾಮರಾಜನಗರ ವಲಯ ಅಬಕಾರಿ ನಿರೀಕ್ಷಕರ ಕಚೇರಿ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 22.03.2024 ರಂದು ಸಂಃ 6.30 ರ ಸಮಯದಲ್ಲಿ ಚಾಸಾ–1 ರವರ ಜೊತೆ ನಾನು ಮತ್ತು ಚಾಸಾ–3 ಮತ್ತು 4ರವರುಗಳು ನಮ್ಮ ಇಲಾಖ ಜೀಪು ನೊಂದಣಿ ಸಂಃ KA–10–G–0695 ರಲ್ಲಿ ಮೂಡಲಪುರ ಗ್ರಾಮದ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ಒಬ್ಬ ಆಸಾಮಿಯು ದ್ವಿಚಕ್ರ ವಾಹನದ ಮುಂಭಾಗ ಒಂದು ಪ್ಲಾಸ್ಟಿಕ್ ಚೀಲದ ಗಂಟು ಇಟ್ಟುಕೊಂಡು ಒಂದು ಬೈಪಾಸ್ ಗೆ ತೆರಳುವ ರಸ್ತೆಯಿಂದ ಮೂಡಲಪುರ ಗ್ರಾಮದ ಕಡೆಗೆ ಬರುತ್ತಿದ್ದು, ಆತ ಹೊಂದಿದ ಪ್ಲಾಸ್ಟಿಕ್ ಚೀಲದ ಗಂಟಿನ ಮೇಲೆ ಅನುಮಾನಗೊಂಡ ನಾವುಗಳು ಅವನನ್ನು ತಡೆದು ನಿಲ್ಲಿಸಿ, ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡೆವು.

ನಂತರ ಪ್ಲಾಸ್ಟಿಕ್ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ 90 ಮಿಲಿಯ 35 ಹೈವಾರ್ಡ್ಸ್ ಚೀರ್ಸ್ ವಿಸ್ಕಿಯ ಟೆಟ್ರಾಪ್ಯಾಕ್‌ಗಳು ಕಂಡುಬಂದವು. ನಂತರ ಆಸಾಮಿಯನ್ನು

ಮದ್ಯವನ್ನು ಸಾಗಿಸಲು ಮತ್ತು ಮಾರಾಟ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು ಕೇಳಿದಾಗ ಇಲ್ಲ ಎಂದು ತಿಳಿರಸಿರುತ್ತಾನೆ. ಆದ್ದರಿಂದ ಆ ಸಮಯದಲ್ಲಿ ಆವೇಳೆಯಾಗಿದ್ದರಿಂದ ನಮ್ಮ ಇಲಾಖಾ ಸಿಬ್ಬಂದಿಗಳನ್ನೇ ಅಬಕಾರಿ ಕಾಯ್ದೆಯ 54 ರಡಿಯಲ್ಲಿ ರುವ ಅಧಿಕಾರವನ್ನು ಬಳಸಿಕೊಂಡು ಆರೋಪಿಯ ಬಳಿ ಇದ್ದ ಮದ್ಯದ ಟೆಟ್ರಾಪ್ಯಾಕ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲ ಮತ್ತು ದ್ವಿ ಚಕ್ರ ವಾಹನವನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಳ್ಳಲಾಯಿತು. ಮಹಜರ್ ಸಮಯದಲ್ಲಿ ನಾನು ಹಾಜರಿದ್ದು ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ನಿಪಿ-2 ಅಮಾನತ್ತು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿ ಕೊಡಲು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ , ಸೀಲು ಸಂಃ 285ರಿಂದ ಸೀಲು ಮಾಡಿದೇವು ಮತ್ತು ಅದಕ್ಕೆ ಪಂಚರಾದ ಸಿಬ್ಬಂದಿಗಳ ಸಿಬ್ಬಂದಿಗಳ ಸಹಿಯನ್ನು ಚೀಟಿಯನ್ನು ಅಂಟಿಸಲಾಯಿತು ಹಾಗೂ ಅದಕ್ಕೆ ಸೀಲು ಮಾಡಲಾಯಿತು. ಮಹಜರ್ ನ್ನು ಸಂಃ 6.30 ರಿಂದ 7.30ವರೆಗೆ ನಡೆಸಿ ನಿಯಾಮಾನುಸಾರ ಆರೋಪಿಯನ್ನು ಬಂಧಿಸಿ, ಆರೋಪಿ ಮತ್ತು ಮಾಲುಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಈ ಬಗ್ಗೆ ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ M.O-1 ಮತ್ತು 2 ಹಾಗೂ ಆರೋಪಿಯನ್ನು ನೋಡಿ ಗುರ್ತಿಸುತ್ತೇನೆ.

**ಪಾಟೀಸವಾಲುಃ ಶ್ರೀ ಜಿ.ಎಸ್.ಕೆ. ವಕೀಲರಿಂದಃ**

ದಿನಾಂಕಃ 22.03.2024 ರಂದು ಸಂಃ 6.30 ರ ಸಮಯದಲ್ಲಿ ಚಾಸಾ-1 ರವರ ಜೊತೆ ನಾನು ಮತ್ತು ಚಾಸಾ-3 ಮತ್ತು 4ರವರುಗಳು ನಮ್ಮ ಇಲಾಖಾ ಜೀಪು ನೊಂದಣಿ ಸಂಃ KA-10-G-0695 ರಲ್ಲಿ ಮೂಡಲಪುರ ಗ್ರಾಮದ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ಒಬ್ಬ ಆಸಾಮಿಯು ದ್ವಿಚಕ್ರ ವಾಹನದ ಮುಂಭಾಗ ಒಂದು ಪ್ಲಾಸ್ಟಿಕ್ ಚೀಲದ

ಗಂಟು ಇಟ್ಟುಕೊಂಡು ಒಂದು ಬೈಪಾಸ್ ಗೆ ತೆರಳುವ ರಸ್ತೆಯಿಂದ ಮೂಡಲಪುರ ಗ್ರಾಮದ ಕಡೆಗೆ ಬರುತ್ತಿದ್ದು, ಆತ ಹೊಂದಿದ ಪ್ಲಾಸ್ಟಿಕ್ ಚೀಲದ ಗಂಟಿನ ಮೇಲೆ ಅನುಮಾನಗೊಂಡ ನಾವುಗಳು ಅವನನ್ನು ತಡೆದು ನಿಲ್ಲಿಸಿ, ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡೆವು.

ನಂತರ ಪ್ಲಾಸ್ಟಿಕ್ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ ಯಾವುದೇ ರೀತಿಯ 90 ಮಿಲಿಯ 35 ಹೈವಾರ್ಡ್ಸ್ ಚೀರ್ಸ್ ವಿಸ್ಕಿಯ ಟೆಟ್ರಾಪ್ಯಾಕ್‌ಗಳು ಕಂಡುಬಂದಿಲ್ಲ ಎಂದರೆ ಸರಿಯಲ್ಲ. ನಂತರ ಆಸಾಮಿಯನ್ನು ಮದ್ಯವನ್ನು ಸಾಗಿಸಲು ಮತ್ತು ಮಾರಾಟ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾನೆ. ಆದ್ದರಿಂದ ಆ ಸಮಯದಲ್ಲಿ ಆವೇಳೆಯಾಗಿದ್ದರಿಂದ ನಮ್ಮ ಇಲಾಖಾ ಸಿಬ್ಬಂದಿಗಳನ್ನೇ ಅಬಕಾರಿ ಕಾಯ್ದೆಯ 54 ರಡಿಯಲ್ಲಿ ರುವ ಅಧಿಕಾರವನ್ನು ಬಳಸಿಕೊಂಡು ಆರೋಪಿಯ ಬಳಿ ಇದ್ದ ಮದ್ಯದ ಟೆಟ್ರಾಪ್ಯಾಕ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲ ಮತ್ತು ದ್ವಿ ಚಕ್ರ ವಾಹನವನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಳ್ಳಲಾಯಿತು.

ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ, ಸೀಲು ಸಂಃ 285ರಿಂದ ಸೀಲು ಮಾಡಿದೇವು ಮತ್ತು ಅದಕ್ಕೆ ಪಂಚರಾದ ಸಿಬ್ಬಂದಿಗಳ ಸಿಬ್ಬಂದಿಗಳ ಸಹಿಯನ್ನು ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.